**ಸಾಕ್ಷಿಯನ್ನು ದಿಃ 07.02.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಪಾಟೀ ಸವಾಲುಃ ಶ್ರೀ ಕೆ.ಪಿ.ಎಂ ವಕೀಲರಿಂದಃ

ನಾನು ಹುಟ್ಟಿದಾಗಿನಿಂದ ಬಂಗಾರಪೇಟೆಯಲ್ಲಿ ವಾಸ ಇರುತ್ತೇನೆ. ನನ್ನ ತಂದೆ ಮೊದಲು ರಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು, ಆನಂತರ ಬೆಎಂಎಲ್ ನಲ್ಲಿ ಕೆಲಸ ಮಾಡುತ್ತಿದ್ದರು. ಡಾಕ್ಟರ್ ಚಂದ್ರಕಾಂತಮ್ಮರವರು ನನ್ನ ತಂದೆಯ ಅಕ್ಕಳಾಗಬೇಕು. ಸದರಿ ಚಂದ್ರಕಾಂತಮ್ಮರವರು ನನ್ನ ತಂದೆಯನ್ನು ದತ್ತಕ ಪಡೆದಿದ್ದರು. ನನ್ನ ತಂದೆಯನ್ನು ದತ್ತಕ ಪಡೆಯುವಾಗ ಚಂದ್ರಕಾಂತಮ್ಮರವರ ಗಂಡ ಜೀವಂತ ಇದ್ದರು. ನನ್ನ ತಂದೆಯನ್ನು ದತ್ತಕ ಪಡೆಯುವಾಗ ಚಂದ್ರಕಾಂತಮ್ಮರವರಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯು ಚಂದ್ರಕಾಂತಮ್ಮರವರ ದತ್ತಕ ಮಗ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ನನ್ನ ತಂದೆ ಸೇವಾ ಪುಸ್ತಕದಲ್ಲಿ  ದತ್ತಕ ತಂದೆ ಮತ್ತು ತಾಯಿಯ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ಎಲ್ಲಾ ಸೇವಾ ದಾಖಲಾತಿಗಳು ಮತ್ತು ಇತರ ದಾಖಲಾತಿಗಳಲ್ಲಿ ನನ್ನ ತಂದೆಯ ತಂದೆ ಹೆಸರು ರಾಮಸ್ವಾಮಿ  ಎಂದು ಬರುತ್ತಿತ್ತು  ಎಂದರೆ ಸರಿ. ನನ್ನ ತಂದೆಯನ್ನು ಚಂದ್ರಕಾಂತಮ್ಮ ಮತ್ತು ಅವರ ಗಂಡ ಯಾವತ್ತು ದತ್ತಕ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದತ್ತಕ ಪಡೆದಿರುವುದಾಗಿ ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ನನ್ನ ತಂದೆ ವಿಚಾರಣೆಗೆ ಒಳಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ ನೀಡಿರುವ ಸಾಕ್ಷ್ಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ನನಗೆ ಗೊತ್ತಿರುತ್ತದೆ. ದಾವಾ ಸ್ವತ್ತು ಖಾಲಿ ನಿವೇಶನ ಆಗಿರುತ್ತದೆ. ನಾನು 10 ನೇ ತರಗತಿ ಓದಿರುತ್ತೇನೆ. ನಿವೇಶನ ಮತ್ತು ಜಮೀನು ಬೇರೆ ಬೇರೆ ಎಂದರೆ ಸರಿ. 1970 ರಲ್ಲಿ ಚಂದ್ರಕಾಂತಮ್ಮರವರು ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ. ಸದರಿ ಖರೀದಿ ಪತ್ರದ ಅನ್ವಯ ಖಾತೆ ಬದಲಾವಣೆಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.  ನನ್ನ ತಂದೆ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿರುತ್ತದೆ. 1970 ರಿಂದ ಇಲ್ಲಿಯವರೆಗೂ ಖರೀದಿಸಿದ  ಸ್ವತ್ತಿನ ಸಂಬಂಧ ಚಂದ್ರಕಾಂತಮ್ಮರವರ ಹೆಸರಿನಲ್ಲಿ ಖಾತೆ ನಮೂದಾತಿ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.  ದಾವಾ

ಸ್ವತ್ತನ್ನು ಆಗಾಗ್ಗೆ ನೋಡುತ್ತೇನೆ. ನಿಡಿ -2 ಫೋಟೋದಲ್ಲಿ ಕಾಣುವ ಕಾಂಪೌಂಡ್ ಒಳಗೆ ದಾವಾ ಸ್ವತ್ತು ಬರುತ್ತದೆ. ಈಗ ತೋರಿಸಿದ ಫೋಟೋದಲ್ಲಿ ಕಾಣಿಸುವ ಸ್ವತ್ತು ದಾವಾ ಸ್ವತ್ತುಗಳು ಆಗಿರುತ್ತದೆ. ಅವುಗಳನ್ನು ನಿಡಿ -22 ಮತ್ತು 23 ಎಂದು ಗುರುತಿಸಲಾಯಿತು. ನಿಡಿ -23 ರ ಫೋಟೋದಲ್ಲಿ ಕಾಣುವ ಮನೆ ದಾವಾ ಸ್ವತ್ತು ಅಲ್ಲ ಅದರ ಮುಂದೆ ಇರುವ ಖಾಲಿ ಜಾಗ ದಾವಾ ಸ್ವತ್ತು ಆಗಿರುತ್ತದೆ. ನಿಡಿ -23 ರಲ್ಲಿ ಕಾಣುವ ಮನೆ ನಮ್ಮ ಜಾಗಕ್ಕೆ ಸಂಬಂಧಪಟ್ಟಿಲ್ಲ ಸದರಿ ಮನೆಯನ್ನು ನಾವು ಕಟ್ಟಿರುವುದಿಲ್ಲ. ನಿಡಿ-23 ರಲ್ಲಿ ಕಾಣುವ ಮನೆಯನ್ನು 2011 ರಿಂದ ನಾನು ನೋಡುತ್ತಿದ್ದೇನೆ. ಸದರಿ ಮನೆ -ಕಟ್ಟಡ 50-60 ವರ್ಷಗಳ ಹಳೆಯದ್ದು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಟ್ಟಡ ನಮ್ಮ ಜಾಗದಲ್ಲಿರುವುದಿಲ್ಲ. ಸದರಿ ಮನೆಯನ್ನು ತೆರವುಗೊಳಿಸಲು ನನ್ನ ತಂದೆ ಮತ್ತು ನನ್ನ ಅತ್ತೆ ಪ್ರಯತ್ನ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆಯ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಪ್ರತಿವಾದಿ ವಾಸ ಇರುತ್ತಾರೆ ಎಂದರೆ ಸರಿ. ಸದರಿ ಮನೆಯ ಮುಂಭಾಗದ ನಿವೇಶನ ನಮಗೆ ಸೇರಿರುತ್ತದೆ. ಸದರಿ ಮನೆಯಲ್ಲಿ 60 ವರ್ಷಗಳಿಂದ ಪ್ರತಿವಾದಿ ವಾಸ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಗೆ ಪ್ರತಿವಾದಿ ಕಂದಾಯ ಪಾವತಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗದಲ್ಲಿ ನಮ್ಮ ಸ್ವತ್ತು ಯಾವುದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಸ್ವತ್ತನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**

**(ಕೇಶವಮೂರ್ತಿ.ಬಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಬಂಗಾರಪೇಟೆ**